# ಲಿಂಗ ಅಂಗ

ಲಿಂಗದ ಕಲ್ಪನೆ ಬಹುಪ್ರಾಚೀನವಾದುದು. ಇದು ನಾಗರಿಕತೆಯ ಕಾಲದಿಂದ ಅಲ್ಲಲ್ಲಿ ಉಳಿದು, ಬೆಳೆದುಕೊಂಡು ಬಂದಿದೆ. ಶೈವಸಂಪ್ರದಾಯದವರು ಸ್ಥಾವರಲಿಂಗದ ಆರಾಧಕರಾಗಿದ್ದರು. ಅನಂತರ ವೀರಶೈವರಲ್ಲಿ ಅದು ಇಷ್ಟಲಿಂಗವಾಯಿತು. ದ್ವಾದಶಲಿಂಗಗಳ ಕಲ್ಪನೆಗೂ ಆರಾಧನಾಸಂಸ್ಕೃತಿಗೂ ಪರಸ್ಪರ ಸಂಬಂಧಗಳುಂಟು. ಸಂಸ್ಕೃತಿಯ ಚರಿತ್ರೆಯಲ್ಲಿ ಇದು ನಮಗೆ ಕಾಣಬರುತ್ತದೆ. ಶೈವದಲ್ಲೂ ಅನೇಕ ಭೇದಗಳುಂಟು. ಉತ್ತರ ಭಾರತದ ಅನೇಕ ಶೈವಕ್ಷೇತ್ರಗಳು ಮತ್ತು ದಕ್ಷಿಣಭಾರತದ ಅನೇಕ ಶೈವಕ್ಷೇತ್ರಗಳು ಸ್ಥಾವರಲಿಂಗದ ಸ್ವರೂಪದ ಹಿರಿಮೆಯನ್ನು ಸ್ಥಳೀಯ ಹಾಗೂ ಪೌರಾಣಿಕ ಪರಿವೇಶಗಳಿಂದ ಕೊಂಡಾಡುತ್ತವೆ. ಮಹಾಪುರಾಣಗಳಲ್ಲಿ ಒಂದಾದ ಶಿವಪುರಾಣ ಮತ್ತು ಲಿಂಗಪುರಾಣಗಳ ಅಂತರ್ಗತ ಸ್ವರೂಪಗಳನ್ನು ಈ ಹಿನ್ನೆಲೆಯಲ್ಲಿ ತೌಲನಿಕವಾಗಿ ಪರಿಭಾವಿಸಲು ಅವಕಾಶಗಳಿವೆ.

ಸರ್ವಜ್ಞನು 'ಇಷ್ಟಲಿಂಗ ಪದ್ಧತಿ' ಎಂಬ ಅಧ್ಯಾಯದಲ್ಲಿ 'ಇಷ್ಟಲಿಂಗ'ದ ಗೂಢತತ್ವವನ್ನು ಹೇಳುತ್ತಾನೆ. ನಾವು ಅದನ್ನು ತಿಳಿಯಲು ಶೈವಶೈವೇತರ ಚಿಂತನೆಗಳ ಹಿನ್ನೆಲೆ ಅಗತ್ಯ. ಅಲ್ಲಮಪ್ರಭುವು ಲಿಂಗಪ್ರಸಾದಿ, ಲಿಂಗಪ್ರಾಣ, ಲಿಂಗಭಕ್ತ, ಲಿಂಗವಂತ, ಲಿಂಗಸಾರಾಯ, ಲಿಂಗಾನುಭವ ಎಂಬ ಪದಗಳನ್ನು ಬಳಸುತ್ತಾನೆ. ಅವನು 'ಲಿಂಗ ಒಳಗೋ ಹೊರಗೋ', 'ಲಿಂಗವನರಿಯದೆ' ಮುಂತಾದ ವಚನಗಳಲ್ಲಿ 'ಲಿಂಗ'ದ ವಿಶಿಷ್ಟಾನುಭವವನ್ನು ನಮಗೆ ತಿಳಿಸುತ್ತಾನೆ. ಸರ್ವಜ್ಞನೂ ಕೂಡ 'ಇಷ್ಟಲಿಂಗ' ಪರಿಕಲ್ಪನೆಯನ್ನು ಆಯತಗೊಳಿಸುತ್ತಾನೆ. ಅವನ ವಚನವೊಂದು ಹೀಗಿದೆ: 'ಲಿಂಗದಲಿ ಮನವಾಗಿ, ಲಿಂಗದಲಿ ನೆನಹಾಗಿ, ಲಿಂಗದಲಿ ನೋಟ ನುಡಿಕೂಟವಾದವನು ಲಿಂಗವೇ ಅಕ್ಕು ಸರ್ವಜ್ಞ' ಎಂಬ ಮಾತನ್ನು ಆಡುತ್ತಾನೆ. ನಮಗೆ ಅದರ ರಹಸ್ಯ ತಿಳಿಯಬೇಕಾದರೆ, ಆನುಭಾವಿಕ ಮಾರ್ಗದ ಆಧ್ಯಾತ್ಮಿಕ ಸರಣಿಯನ್ನು ತಿಳಿಯುವುದು ಅವಶ್ಯ.

ಲಿಂಗ ಎಂಬ ಪದಕ್ಕೆ ಕಾರಣ, ಸ್ಥಾವರಲಿಂಗ, ಇಷ್ಟಲಿಂಗ ಮತ್ತು ಪರಶಿವ ಎಂದು ಪ್ರಮುಖವಾಗಿ ನಾಲ್ಕು ಅರ್ಥಗಳಿವೆ. ಮೊದಲೆರಡು ಅರ್ಥಗಳು ಮೂರ್ತರೂಪದ ಲಿಂಗಕ್ಕೆ ಅನ್ವಯವಾದರೆ; ಉಳಿದೆರಡು ಅರ್ಥಗಳು ಲಿಂಗಾಯತ ನೆಲೆಗೆ ಅನ್ವಯವಾಗುತ್ತವೆ. ಪರಶಿವನೇ ಜಗತ್ತಿನ ಸೃಷ್ಟಿ ಸ್ಥಿತಿಲಯಕ್ಕೆ ಕಾರಣ. ಆದ್ದರಿಂದ ಅವನನ್ನು (ಕಾರಣ) ಲಿಂಗವೆಂದು ಕರೆಯಲಾಯಿತು. ಆದರೆ, ಇದು ಗುರುತು ಅಥವಾ ಸಂಕೇತ ಮಾತ್ರ. ಅದೇ ಪರಶಿವನಲ್ಲ. ಲಿಂಗಕ್ಕೆ ಒಂದು ಆಕಾರ ಮತ್ತು ಗಾತ್ರವುಂಟು. ಪರಶಿವನಿಗೆ ವಿಶಿಷ್ಟ ಆಕಾರವಾಗಲಿ, ಗಾತ್ರವಾಗಲಿ ಇಲ್ಲ. ಹೀಗಾಗಿ, ಸ್ಥಾವರಲಿಂಗವು ಸಮಾಜ ಸಂಸ್ಕೃತಿಯ ಅನಾದಿ ಕಲ್ಪನೆಯಾಗಿದೆ. ಆದರೆ, ಇಷ್ಟಲಿಂಗವು ಮಧ್ಯಕಾಲೀನ ಅನುಭಾವಿಗಳಲ್ಲಿ ಬೆಳೆದುಬಂದಿದೆ. ಸರ್ವಜ್ಞನು 'ಇಷ್ಟಲಿಂಗ'ದ ಕಲ್ಪನೆಯನ್ನು ಬಳಸುತ್ತಾನೆ. ಸ್ಥಾವರಲಿಂಗ ಗುಡಿಯಲ್ಲಿ ಪ್ರತಿಷ್ಠಿತವಾಗಿರುತ್ತದೆ. ಅದಕ್ಕೊಬ್ಬ ಪೂಜಾರಿಯನ್ನು ನೇಮಿಸಲಾಗಿರುತ್ತದೆ. ಕೆಲವು ವಿಶಿಷ್ಟ ಜಾತಿಯ ಜನರಷ್ಟೆ ಸ್ಥಾವರಲಿಂಗವನ್ನು ಪೂಜಿಸಬೇಕು. ಗರ್ಭಗುಡಿಗೆ ಅವರು ಮಾತ್ರ ಹೋಗಬಲ್ಲರು. ಇಂಥ ನಿಯಮಗಳು ಸ್ಥಾವರಲಿಂಗಕ್ಕೆ ಮಾತ್ರ ಉಂಟು. ಆದರೆ, ಇಷ್ಟಲಿಂಗ ಪೂಜೆಗೆ ಹೆಣ್ಣು ಗಂಡುಗಳೆಂಬ ಭೇದವಿಲ್ಲ, ಸೂತಕಗಳಿಲ್ಲ. ಕಾಲಗಳ ಪರಿಮಿತಿಯಿಲ್ಲ. ಇಂಥ ಸಮುದಾಯಕ್ಕೆ ಸೇರಿರಬೇಕೆಂಬ ನಿಯಮವೂ ಇಲ್ಲ. ಇಷ್ಟಲಿಂಗವನ್ನು ಪಡೆಯಲು ಅರ್ಹತೆಯೊಂದು ಬೇಕು. ಅದೆಂದರೆ ಭವಿತನದ ಜೀವನದಲ್ಲಿ ಅತೃಪ್ತಿ ಮತ್ತು ಶಿವಸಾಯುಜ್ಯ ಪಡೆಯಬೇಕೆಂಬ ಉತ್ಕಟ ಆಕಾಂಕ್ಷೆ. ಇಷ್ಟಲಿಂಗವನ್ನು ವೀರಶೈವ ಗುರುವಿನಿಂದ ಪಡೆಯಬೇಕು. ಗುರುವಾದವನೂ ಕೂಡ ದೀಕ್ಷಾವಿಧಿಗಳನ್ನು ತಿಳಿದಿದ್ದರೆ ಸಾಲದು; ಲಿಂಗಾಂಗ ಸಾಮರಸ್ಯ ಪಡೆದ ವ್ಯಕ್ತಿಯೇ ಅವನಾಗಿರಬೇಕು.

ಮಧ್ಯಕಾಲೀನ ಲಿಂಗಾನುಭವಿಗಳು ವಿಶಿಷ್ಟ ಚಹರೆಯನ್ನು ಪಡೆದಿರುತ್ತಿದ್ದರು. ಪ್ರತಿಯೊಬ್ಬ ಮನುಷ್ಯನಲ್ಲಿಯೂ ಚೈತನ್ಯ ಇರುವುದು ಸರಿಯಷ್ಟೆ? ಅದು ನೆತ್ತಿ ಮತ್ತು ಹಣೆಯಲ್ಲಿ ವಿಶೇಷವಾಗಿ ಇರುತ್ತದೆ. ಆಧಾರಚಕ್ರ ಮುಂತಾದ ಸ್ಥಾನಗಳಲ್ಲಿ ಪರಶಿವ (ಲಿಂಗ) ಇದ್ದರೂ ಧ್ಯಾನದ ಮೂಲಕ ಆಜ್ಞಾಚಕ್ರ ಹಾಗೂ ಭ್ರೂಮಧ್ಯದಲ್ಲಿರುವ ಮಹಾಲಿಂಗವನ್ನು ಸಹಸ್ರಾರಚಕ್ರದಲ್ಲಿರುವ (ನೆತ್ತಿ) ಶೂನ್ಯಲಿಂಗವನ್ನು ಸಾಕ್ಷಾತ್ಕರಿಸಿಕೊಳ್ಳುವುದು ಅವಶ್ಯ. ಇದೇ ಜೀವನದ ಪರಮೋದ್ದೇಶ. ಗುರುವು ಸಾಧಕನ ನೆತ್ತಿಯನ್ನು ಮುಟ್ಟಿ, ಅಲ್ಲಿರುವ ಚೈತನ್ಯವನ್ನು ತಂದು ಇಷ್ಟಲಿಂಗದಲ್ಲಿ ಪ್ರತಿಷ್ಠಾಪಿಸುತ್ತಾನೆ. ಆಗ ಇಷ್ಟಲಿಂಗವು ಆರಾಧನೆಗೆ ಯೋಗ್ಯವಾಗುತ್ತದೆ. ಸಾಧಕನಿಗೆ ಇಷ್ಟಲಿಂಗ ಒಂದು ಜಡವಸ್ತುವಾಗದೆ, ಚಿತ್‌ಸ್ವರೂಪನಾದ ಪರಶಿವನ ಸಂಕೇತ ಅಥವಾ ಆವಾಸಸ್ಥಾನವಾಗುತ್ತದೆ. ಈ ಹಿನ್ನೆಲೆಯನ್ನು ನಾವು ತಿಳಿಯುವುದು ಅವಶ್ಯ. ಸರ್ವಜ್ಞನ ಕೆಲವು ವಚನಗಳನ್ನು ಒಮ್ಮೆ ಗಮನಿಸಿ: 'ಒಮ್ಮನದಲಿ ಶಿವಪೂಜೆಯ ಗಮ್ಮನೆ ಮಾಡುವುದು', 'ಶಿವನೊಳು ನೆನಹ ಬಿಡದಿರ್ದಡಾತಂಗೆ ಶಿವಲೋಕದಿರವು', 'ಲಿಂಗದ ದರುಶನ, ಲಿಂಗದ ಸ್ಪರುಶನ ಲಿಂಗ ಸಹ ಸರ್ವಸುಖಭೋಗವಾದವನು ಲಿಂಗವೇ ಅಕ್ಕು', 'ಓದುವಾದಗಳೇಕೆ? ಗಾದೆಯ ಮಾತೇಕೆ, ವೇದ ಪುರಾಣ ನನಗೇಕೆ ಲಿಂಗದ ಹಾದಿಯರಿದವಗೆ' ಎಂಬ ಮಾತುಗಳನ್ನು ಮೇಲೆ ವ್ಯಾಖ್ಯಾನಿಸಿದ ಹಿನ್ನೆಲೆಯಲ್ಲಿ ನಾವು ತಿಳಿಯುವುದು ಅವಶ್ಯ.

ಇಷ್ಟಲಿಂಗ ಕೇವಲ ಪೂಜಿಸುವಂಥ ವಸ್ತುಮಾತ್ರವಲ್ಲ. ಅದು ಸಾಧಕನ ವಿಚಾರಶಕ್ತಿಗೆ ಸದಾ ಇಂಬಾಗಿರುತ್ತದೆ. ಸಾಧಕನಾದವನು ವಿಕಾಸ ಆದಂತೆಲ್ಲಾ ಇಷ್ಟಲಿಂಗವನ್ನು ಧ್ಯಾನದ ವಸ್ತುವನ್ನಾಗಿ ಮಾಡಿಕೊಳ್ಳುವುದು ಅವಶ್ಯ. ಪರಶಿವನನ್ನು ಕಾಣುವುದೇ ನಿಜವಾದ ಇಷ್ಟಲಿಂಗಪೂಜೆ. ಅಂಗಕ್ಕೂ ಲಿಂಗಕ್ಕೂ ಇರುವ ಸಮರಸಭಾವದ ನೆಲೆಯನ್ನು ತಿಳಿಯಬೇಕಾದರೆ 'ಇಷ್ಟಲಿಂಗ'ದ ಪರಮಾರ್ಥ ಸತ್ಯ ತಿಳಿಯಬೇಕಾಗುತ್ತದೆ. ಅಂಗವು ರಕ್ತಮಾಂಸಗಳಿಂದ ಕೂಡಿದುದು ಮಾತ್ರವಲ್ಲ. ಅದೊಂದು ಚೈತನ್ಯವೇ. ಹೀಗಾಗಿ, ಅದು ಸಾಧನಶರೀರ. ಅಂಗವೇ ಬೇರೆ ಲಿಂಗವೇ ಬೇರೆ ಎಂಬ ಪ್ರಾಥಮಿಕ ತಿಳಿವಳಿಕೆಯನ್ನು ಸಾಧಕನು ಮೀರಬೇಕು. ಗುರುವಿನಿಂದ ಅವೆರಡನ್ನು ಸಾಮರಸ್ಯಗೊಳಿಸುವ ರಹಸ್ಯವನ್ನು ತಿಳಿಯಬೇಕು. ಲಿಂಗದಲ್ಲಿಯೇ ಅನುಭಾವಿಯ ನೆನಹು ಘನವಾಗಬೇಕು. ಲಿಂಗವು ಅಂಗದಲ್ಲಿ ಸ್ವಾಯತಗೊಳ್ಳಬೇಕು. ಆಗ ಅಂಗವೇ ಲಿಂಗವಾಗುತ್ತದೆ. ಇದೇ ಜೀವನದ ಪರಮದೃಷ್ಟಿ. ಇದು ಲಿಂಗಾಂಗ ಸಾಮರಸ್ಯದ ನೆಲೆ. ಪ್ರತಿಯೊಬ್ಬ ಸಾಧಕನೂ ಈ ಹಂತಕ್ಕೆ ಏರಬೇಕು. ಆಗ ಅವನು ಲಿಂಗಾನುಭವಿಯಾಗುತ್ತಾನೆ; ಅವನು ಆಡುವ ಮಾತೆಲ್ಲಾ ಜ್ಯೋತಿರ್ಲಿಂಗವೇ ಆಗುತ್ತದೆ.

■ ಪುರಂಜೀವಿ

## ಮಾತೇ ಮುತ್ತು

- ಜೀವನದಲ್ಲಿ ಎದುರಾಗುವ ಸೋಲುಗಳು ಗೆಲುವಿಗೆ ಮೆಟ್ಟಿಲಾಗಬೇಕು.
  —ಡೇಲ್ ಕಾರ್ನಗಿ
- ಕಾಮುಕ ತನ್ನನ್ನೇ ಇತರರಲ್ಲೂ ಕಾಣುತ್ತಾನೆ.
  —ಕಾಳಿದಾಸ
- ನಾಯಕನಾಗಿ ಬಾಳು, ಅದಕ್ಕಾಗಿ ಜೀವನದಲ್ಲಿ ಹೆದರಿಕೆಯನ್ನು ಬಿಡು.
  —ಸ್ವಾಮಿ ವಿವೇಕಾನಂದ
- ಬಾಳುವಷ್ಟು ಕಾಲವೂ ಕಲಿಯುತ್ತಲೇ ಇರಬೇಕು.
  —ತೀನಂಶ್ರೀ
- ಸೋಮಾರಿಯಾಗಿರುವುದು ಸಾಯುವದಕ್ಕಿಂತ ಅಡ್ಡದಾರಿ. ಕ್ರಿಯಾಶೀಲನಾಗಿರುವುದು ಬದುಕುವ ಮಾರ್ಗ.
  —ಗೌತಮ ಬುದ್ಧ
- ದಯೆಯೇ ತೃಪ್ತಿ ತರುವ ಸತ್ಯ.
  —ಖಲೀಲ್ ಗಿಬ್ರಾನ್
- ರೂಪ ಕಣ್ಣುಗಳಿಗೆ ಸೀಮಿತ. ಗುಣ ಆತ್ಮದವರೆಗೆ ತಲುಪುವ ಸಾಧನ.
  —ತ್ರಿವೇಣಿ
- ತಿಳಿದವಗೆ ಜಗವೆಲ್ಲ ರಸದ ಊಟ.
  —ಜಿ.ಎಸ್. ಶಿವರುದ್ರಪ್ಪ